ತುಂಬಲು ಅಭ್ಯರ್ಥಿಗಳ ಆಯ್ಕೆಯ ಪ್ರಕ್ರಿಯೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ನಡೆಯುತ್ತಿದ್ದು ಲೋಕಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ ಬಂದ ತಕ್ಷಣ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು. ಸಧ್ಯಕ್ಕೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಮೀಪದ ಕಿರಿಯ ಕಾಲೇಜುಗಳಲ್ಲಿರುವ ಉಪನ್ಯಾಸಕರುಗಳನ್ನು ಖಾಲಿ ಇರುವ ಶಿಕ್ಷಕೇತರ ಸಿಬ್ಬಂದಿಯನ್ನು ಈಗ ಆರ್ಥಿಕ ಮಿತವ್ಯಯದ ಆದೇಶ ಜಾರಿಯಲ್ಲಿರುವುದರಿಂದ ತುಂಬಲು ಸಾಧ್ಯವಾಗಲಿಲ್ಲ.

(5) ಕುಂದಾಪುರ ಪುರಸಭೆಗೆ ಒಳಚರಂಡಿ ಯೋಜನೆ ಮಂಜೂರು.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) :- ಮಾನ್ಯ ಉಪಾಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಪುರಸಭೆಯಲ್ಲಿ ಒಂದು ಬದಿಯಲ್ಲಿ ಸಮುದ್ರವಿದ್ದು, ಇನ್ನೊಂದು ಬದಿಯಲ್ಲಿ ಹೊಳೆಯಿದ್ದು, ಬಹಳಷ್ಟು ವರ್ಷಗಳಿಂದ ಒಳಚರಂಡಿಯಾಗಿ ಬೇಡಿಕೆಯನ್ನು ಸಾರ್ವಜನಿಕರ ಒತ್ತಡ ಇರುವುದರಿಂದ, ಆದಷ್ಟು ಶೀಘ್ರ ಕುಂದಾಪುರ ಪುರಸಭೆಗೆ ಒಳಚರಂಡಿ ಯೋಜನೆಯನ್ನು ಮಂಜೂರು ಮಾಡಬೇಕೆಂದು ಮತ್ತು ಪುರಸಭೆಯಲ್ಲಿ ಕುಡಿಯುವ ನಲ್ಲಿನೀರಿನ ಯೋಜನೆ ಇದ್ದರೂ ಸಹ ನಾಗರೀಕರಿಗೆ ಕುಡಿಯಲು ಅಗತ್ಯವಿರುವಷ್ಟು ನೀರು ಒದಗಿಸಲು ಆಗದಿರುವುದರಿಂದ ಅತೀ ಸಮೀಪದಲ್ಲಿ ಹರಿಯುವ ವರಾಹಿ ಹೊಳೆಯ ನೀರನ್ನು ಶುದ್ಧೀಕರಿಸಿ ಕುಂದಾಪುರ ಪುರಸಭೆಗೆ ಕುಡಿಯುವ ನೀರಿನ ಯೋಜನೆ ಮಾಡುವುದರೊಂದಿಗೆ ಒಳಚರಂಡಿ ಯೋಜನೆಯನ್ನು ಮಂಜೂರು ಮಾಡಬೇಕಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :- ಸನ್ಮಾನ್ಯ ಉಪಾಧ್ಯಕ್ಷರೇ, ಕುಂದಾಪುರ ಪಟ್ಟಣದ ಜನಸಂಖ್ಯೆಯು 1991 ರ ಜನಗಣತಿಯ ಪ್ರಕಾರ 28,477 ಆಗಿದ್ದು ಹಾಲಿ ಜನಸಂಖ್ಯೆಯು 32,000 ಇರಬಹುದು. ಈ ಪಟ್ಟಣಕ್ಕೆ ಹಾಲಿ ನೀರು ಸರಬರಾಜು ಮುಖ್ಯವಾಗಿ 5 ತೆರೆದ ಬಾವಿಗಳಿಂದ ಹಾಗೂ 4 ಕೊಳವೆಬಾವಿಗಳಿಗೆ ಕೈಪಂಪು ಅಳವಡಿಸಿ ಸರಬರಾಜು ಆಗುತ್ತಿದೆ. ಹಾಲಿ ದಿನಂಪ್ರತಿ ತಲಾ 30 ಲೀಟರ್ ನೀರು ಸರಬರಾಜು ಮಾಡಲಾಗುತ್ತಿದ್ದು ನಿರ್ವಹಣೆಯನ್ನು ಪುರಸಭೆಯವರೇ ಮಾಡುತ್ತಿದ್ದಾರೆ.

ಈ ಪಟ್ಟಣಕ್ಕೆ ನೀರು ಸರಬರಾಜು ಉತ್ತಮ ವಾರಾಹಿ ನದಿಯನ್ನು ಮೂಲವಾಗಿ ಇಟ್ಟುಕೊಂಡು ಒಂದು ಯೋಜನೆಯನ್ನು ತಯಾರಿಸಲು ಪುರಸಭೆಯವರಿಂದ ಬೇಡಿಕೆ ಬಂದಿದ್ದು ಯೋಜನೆಯನ್ನು ತಯಾರಿಸಲು ತನಿಖೆಯನ್ನು ಮಾಡಿ ಅಂದಾಜನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಪ್ರಸ್ತಾವನೆ ಮಾಡಲು ನೀರು ಸರಬರಾಜಿನ ಕನಿಷ್ಠ ಪ್ರಮಾಣವು 100 ಲೀಟರ್ ಇರಬೇಕು. ಆದ್ದರಿಂದ ನೀರಿನ ಪ್ರಮಾಣವನ್ನು ಹೆಚ್ಚಿಸಿದ ನಂತರ ಈ ಯೋಜನೆಯನ್ನು ಕೈಗೊಳ್ಳುವುದು ಉಚಿತ. ಆದರೂ ಪುರಸಭೆಯವರು ಬೇಡಿಕೆಯನ್ನು ಸಲ್ಲಿಸಿದ ಮೇರೆಗೆ ಯೋಜನೆಯನ್ನು

ತಯಾರಿಸಲು ತನಿಖಾ ಕಾರ್ಯವನ್ನು ಕೈಗೊಂಡು ಅಂದಾಜನ್ನು ತಯಾರಿಸಲಾಗುವುದು. ಆ ಅಂದಾಜಿನ ಶೇಕಡ 20 ರಷ್ಟು ಮೊತ್ತವನ್ನು ಪುರಸಭೆಯವರೇ ತಮ್ಮ ವಂತಿಕೆ ಯಿಂದ ಭರಿಸಬೇಕಾಗುತ್ತದೆ. ಉಳಿದ ಹಣವನ್ನು ಆರ್ಥಿಕ ಸಂಸ್ಥೆಗಳಿಂದ ಮತ್ತು ಸರ್ಕಾರದಿಂದ ಸಾಲದ ರೂಪದಲ್ಲಿ ಪಡೆಯಬೇಕಾಗುತ್ತದೆ. ಈ ರೀತಿ ಹಣ ಒದಗಿಸಿದ ನಂತರ ಒಳಚರಂಡಿ ಯೋಜನೆ ಕೈಗೊಳ್ಳಲು ಸಾಧ್ಯವಾಗುವುದು.

(6) ಹುಬ್ಬಳ್ಳಿ ನಗರದ ಹಳೇ ಹುಬ್ಬಳ್ಳಿಯಲ್ಲಿ ಅತಿಕ್ರಮಣವಾಗಿ ಕಟ್ಟಿರುವ ಗುಡಿಸಲುಗಳನ್ನು ಅವರಿಗೇ ನೀಡುವ ಕುರಿತು.

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) :- ಮಾನ್ಯ ಉಪಾಧ್ಯಕ್ಷರೇ, ಹುಬ್ಬಳ್ಳಿ ನಗರದ ಹಳೇ ಹುಬ್ಬಳ್ಳಿ ನಾರಾಯಣ ಸೋಪಾ ಸಿಟಿ ಸರ್ವೆ ನಂ: 150 ರಲ್ಲಿ ಅತಿಕ್ರಮಣವಾಗಿ ಕಟ್ಟಲಾದ ಗುಡಿಸಲುಗಳು ಶೆಡ್ಡುಗಳು (ಪಾಂಡುರಂಗ ಕಾಲೋನಿ) ಬಗ್ಗೆ ಹುಬ್ಬಳ್ಳಿ ಧಾರವಾಡ ಮಹಾನಗರಸಭೆಯ ಠರಾವು ಪಾಸುಮಾಡಿ ಸದರಿ ಗುಡಿಸಲುಗಳನ್ನು ಅಧಿಕೃತಗೊಳಿಸಿ ಸದರಿ ಆಸ್ತಿಗಳನ್ನು ಅವರವರಿಗೇ ಕೊಡಬೇಕೆಂದು ತೀರ್ಮಾನಿಸಲಾಗಿದೆ ಹಾಗೂ ಕಮೀಷನರ್ ರಾಜ್ಯ ಸರ್ಕಾರಕ್ಕೂ ದಿನಾಂಕ 24-4-96 ರಂದು ಪತ್ರ ಬರೆದು ಸದರಿ ಆಸ್ತಿಗಳನ್ನು ಸದರಿ ಜನರಿಗೆ ಖರೀದಿಗೆ ಕೊಡುವಂತೆ ಶಿಫಾರಸ್ಸು ಮಾಡಿ ಅವುಗಳ ಮಂಜೂರು ಮಾಡುವಂತೆ ಕೇಳಿರುತ್ತಾರೆ. ಮೇಲ್ಕಂಡ ಆಸ್ತಿಯಲ್ಲಿ ಹಿಂದುಳಿದ ಆರ್ಥಿಕವಾಗಿ ದುರ್ಬಲರಾದ ಬಡಜನತೆ ವಾಸ ಮಾಡುತ್ತಿದ್ದು ಸದರಿ ಆಸ್ತಿಯನ್ನು ಪ್ರತಿ ಚದರ ಅಡಿಗೆ ಒಂದು ರೂಪಾಯಿ ಅಥವಾ ಎರಡು ರೂಪಾಯಿನಂತೆ ಖರೀದಿಗೆ ಕೊಡುವಂತೆ ಅಲ್ಲಿಯ ಜನರು ಸರ್ಕಾರಕ್ಕೆ ಮನವಿ ಮಾಡಿ ಕೊಂಡಿರುತ್ತಾರೆ. ಕಾರಣ ಈ ಎಲ್ಲಾ ವಿಷಯಗಳನ್ನು ಪರಿಶೀಲಿಸಿ ಸದರಿ ಪಾಂಡುರಂಗ ಕಾಲೋನಿಯಲ್ಲಿ ವಾಸವಾಗಿರುವ ಬಡ ದುರ್ಬಲ ವರ್ಗದ ಜನತೆಗೆ ಅತೀ ಕಡಿಮೆ ಬೆಲೆಯಲ್ಲಿ ಆಸ್ತಿ ಖರೀದಿಗೆ ಕೊಟ್ಟು ಅವರ ಜೀವನಕ್ಕೆ ಅನುಕೂಲ ಮಾಡಿಕೊಡುವಂತೆ ಸರ್ಕಾರ ಅತೀ ಶೀಘ್ರ ಆದೇಶ ಹೊರಡಿಸಬೇಕಾಗಿ ನಾನು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಖಿರಾಜುದ್ದೀನ್ ಎನ್. ಪಾಟೀಲ್ (ಪೌರಾಡಳಿತ ಸಚಿವರು) :- ಹುಬ್ಬಳ್ಳಿ ನಗರದ ಹಳೇ ಹುಬ್ಬಳ್ಳಿ ನಾರಾಯಣಸೋವ ಸಿ.ಸ.ನಂ. 150 ವಾರ್ಡ್ ನಂ. 5 ರಲ್ಲಿ ಮಹಾನಗರ ಸಭೆಯ ಮಾಲ್ಕಿ ಜಾಗದಲ್ಲಿ ಅನಧಿಕೃತವಾಗಿ ಅತಿಕ್ರಮಣ ಮಾಡಿ ಮನೆ ಕಟ್ಟಿಸಿದ್ದು ಈ ಬಗ್ಗೆ ಮಹಾನಗರ ಪಾಲಿಕೆ ಕೌನ್ಸಿಲ್‌ನ ಠರಾವು ಸಂಖ್ಯೆ 782 ದಿನಾಂಕ 2-9-92 ರಲ್ಲಿ ಅನಧಿಕೃತವಾಗಿ 74 ಜನರು ಮನೆ ಕಟ್ಟಿಕೊಂಡು ವಾಸವಾಗಿದ್ದು ಅವರುಗಳನ್ನು ಅಲ್ಲಿಂದ ತೆರವು ಮಾಡಿಸದೆ ಅವರುಗಳಿಗೆ ಮಾಲೀಕತ್ವವನ್ನು ಯೋಗ್ಯ ಬೆಲೆಗೆ ಖರೀದಿಯಿಂದ ಮಾಡಿಕೊಂಡು ಸರ್ಕಾರದ ಮಂಜೂರಾತಿಗಾಗಿ ಪ್ರಸ್ತಾವನೆ ಕಳುಹಿಸಿರುತ್ತಾರೆ. ಈ ಬಗ್ಗೆ ಈಗಿನ ಚುನಾಯಿತ ಕೌನ್ಸಿಲ್‌ನ ಅಭಿಪ್ರಾಯವನ್ನು ಪಡೆದು ಪ್ರಸ್ತಾವನೆಯನ್ನು ಕಳುಹಿಸಲು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತರಿಗೆ ದಿನಾಂಕ : 24-6-1996 ರಂದು ಕೋರಲಾಗಿದೆ. ಅವರಿಂದ ಉತ್ತರ ಬಂದ ಮೇಲೆ ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.